**O. S. No:45/2024**
**DW:1**

(ಇಂದು ದಿನಾಂಕಃ **10-07-2025** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಮುಂದುವರೆದ ಮುಖ್ಯ ವಿಚಾರಣೆಃ ಶ್ರೀಮತಿ ಪಿ ಸಿ ಎಚ್ ವಕೀಲರಿಂದ:**

ನಾನು ನನ್ನ ಪ್ರಕರಣದ ಸಮರ್ಥನೆಗಾಗಿ ಈ ಕೆಳಕಂಡ ದಾಖಲೆಗಳನ್ನು ಹಾಜರು ಮಾಡಿದ್ದು ಅವುಗಳನ್ನು ಈ ಕೆಳಗಿನಂತೆ ನಿಶಾನೆಗೊಳಪಡಿಸಲಾಯಿತು.

| | |
|---|---|
| **ನಿ.ಡಿ 4** | ನೋಂದಾಯಿತ ಮೃತ್ಯು ಪತ್ರ. |

**ಪಾಟೀ ಸವಾಲುಃ ಶ್ರೀ ಪಿ ಕೆ ಎ ವಕೀಲರಿಂದಃ**

ನಿಡಿ-4 ರಲ್ಲಿರುವ ಆಸ್ತಿಯಲ್ಲಿ ನಾವು ವಾಸವಿದ್ದೇವೆ. ಅಣ್ಣಿಗೇರಿಯಲ್ಲಿ ನಮಗೆ ಸಂಬಂಧಿಸಿ 3 ಮನೆಗಳಿರುತ್ತವೆ. ಅಣ್ಣಿಗೇರಿಯ ಜಾಡಗೇರಿ ಓಣಿಯಲ್ಲಿ ಮನೆ ಇದ್ದು, ಅದು ನನ್ನ ತಂದೆಯ ಆಸ್ತಿಯಾಗಿರುತ್ತದೆ. ಒಂದು ಆಶ್ರಯ ಯೋಜನೆಯಡಿ ನನ್ನ ತಾಯಿಗೆ ಮಂಜೂರಾದ ಮನೆಯಾಗಿರುತ್ತದೆ. ಇನ್ನೊಂದು ಮನೆ ಕೇರಿ ಓಣಿಯಲ್ಲಿದ್ದು, ಅದು ನನ್ನ ತಾಯಿಗೆ ಆಕೆಯ ತವರು ಮನೆಯಿಂದ ಬಂದ ಆಸ್ತಿಯಾಗಿರುತ್ತದೆ. ಜಾಡಗೇರಿ ಓಣಿಯ ಮನೆಯಲ್ಲಿ ನಾವು ಯಾವ ಕಾಲಕ್ಕೂ ವಾಸವಿರಲಿಲ್ಲ. ನಮಗೆ 2 ಮನೆಗಳು ಮಾತ್ರ ಸಂಬಂಧಿಸಿದ್ದವು ಎಂದರೆ ಸರಿ. ನಿಡಿ-4 ರಲ್ಲಿ ನನ್ನ ತಾಯಿ ತನಗೆ 2 ಜನ ಗಂಡು ಮಕ್ಕಳಿದ್ದು, ಹೆಣ್ಣು ಮಕ್ಕಳು ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ಚಿಕ್ಕವನಿಗೆ ವಾಸಕ್ಕೆ ಬೇರೆ ಮನೆ ಇದೆ ಎಂದು ಸದರಿ ಮೃತ್ಯು ಪತ್ರದಲ್ಲಿ ತಿಳಿಸಿದ್ದು, ಸದರಿ ಮನೆ ಜಾಡಗೇರಿ ಓಣಿಯಲ್ಲಿರುವ ಮನೆಯಾಗಿರುತ್ತದೆ. ಸದರಿ ಮನೆ ಕೇರಿ ಓಣಿಯಲ್ಲಿರುವ ಮನೆ ಇರುತ್ತದೆ ಎಂದರೆ ಸರಿಯಲ್ಲ. ಸದರಿ ಮನೆಯ ಚೆಕ್ಕುಬಂದಿ ಹೇಳಲಾಗುವುದಿಲ್ಲ. ನನಗೆ ಮನೆಗಳ ಸಂಖ್ಯೆ ಹೇಳಲಾಗುವುದಿಲ್ಲ. ನನ್ನ ತಾಯಿಯನ್ನು ನನ್ನ ತಮ್ಮ ಆಕೆ ಸಾಯುವವರೆಗೆ ನೋಡಿಕೊಂಡಿದ್ದು ಆದರೆ ನಾನು ನನ್ನ ತಾಯಿಯನ್ನು ಹೆದರಿಸಿ ನಿಡಿ-4 ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಾಯಿಗೆ ಅನಾರೋಗ್ಯವಾಗಿದ್ದಾಗ ನಾನು ಆಕೆ ಆರೋಗ್ಯಯುತವಾಗಿದ್ದಾಳೆ ಎಂದು ನಿಡಿ-4 ನ್ನು ಬರೆಸಿಕೊಂಡಿರುತ್ತೆನೆ ಎಂದರೆ ಸರಿಯಲ್ಲ. ನನ್ನ ತಾಯಿ ಮೃತಪಟ್ಟು 8 ವರ್ಷವಾಗಿರುತ್ತದೆ. ನಿಡಿ-4 ನ್ನು 2012 ರಲ್ಲಿ ಬರೆಯಲಾಗಿರುತ್ತದೆ. ಕೇರಿ ಓಣಿಯ ಮನೆಯಲ್ಲಿ ನನ್ನ ತಮ್ಮ ಹಾಗೂ ಆತನ ಹೆಂಡತಿ ವಾಸವಿದ್ದಾರೆ. ನಿಡಿ-4 ರ ಮನೆಯಲ್ಲಿ ನಾನು, ನನ್ನ ಹೆಂಡತಿ ಹಾಗೂ ನನ್ನ ತಾಯಿ ವಾಸವಿದ್ದೇವು. ನನ್ನ ತಮ್ಮನಿಗೆ ಗೊತ್ತಾಗದ ಹಾಗೆ ನನ್ನ ತಾಯಿಯನ್ನು ಹೆದರಿಸಿ ನಿಡಿ-4 ಬರೆಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಾಯಿ ನನಗೆ ಆಶ್ರಯ ಯೋಜನೆಯಡಿಯಲ್ಲಿ ಬಂದ ಮನೆಯನ್ನು

ನೀಡಿರುತ್ತಾರೆ. ನನ್ನ ತಾಯಿಗೆ ತನ್ನ ತವರು ಮನೆಯಿಂದ ಬಂದ ಮನೆಯನ್ನು ನಾನು ಹಾಗೂ ನನ್ನ ಸಹೋದರ ಹಂಚಿಕೊಳ್ಳುವಂತೆ ತಿಳಿಸಿದ್ದರು. ವಾದಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**

**ನವಲಗುಂದ.**